ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**ಸಿ. ಸಿ. ನಂ.801/2024**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಪ್ರಶಾಂತ ಈರಕ್ಕನವರ | ಪಿಡಬ್ಲ್ಯೂ | 01 |
| ತಂದೆ:ಗಂಡನ ಹೆಸರು | : | ನಾರಾಯಣ | ಸಿಡಬ್ಲ್ಯೂ | 01 |
| ವಯಸ್ಸು | : | 31 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸಸ್ಥಳ | : | ಮಂತಗಿ | | |

ದಿನಾಂಕ **17.01.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-4 ನನ್ನ ತಾಯಿ. ಅವರು ಅಂಗನವಾಡಿ ಟೀಚರ್ ಇರುತ್ತಾರೆ. ಹಾನಗಲ್ ನಲ್ಲಿ ಕೆಲಸ ಮಾಡುತ್ತಾರೆ. ನಾವು ಮಂತಗಿಯಲ್ಲಿ ವಾಸ ಮಾಡುತ್ತೇವೆ. ನನ್ನ ತಾಯಿ ಪ್ರತಿದಿನ ಕೆಲಸಕ್ಕೆ ಬಸ್ ನ ಮುಖಾಂತರ ಹೋಗುತ್ತಾರೆ. ದಿನಾಂಕ: 10.07.2023 ರಂದು ಬೆಳಿಗ್ಗೆ 9.00 ಗಂಟೆ ಕೆ ಎಸ್ ಆರ್ ಟಿ ಸಿ ಬಸ್ ನಲ್ಲಿ ಮಂತಗಿಯಿಂದ ಹಾನಗಲ್ ಗೆ ಬರುತ್ತಿದ್ದರು. 10.00 ಗಂಟೆ ಸುಮಾರಿಗೆ ಕಾಲೇಜಿನ ಸಹಪಾಠಿ ಚಾಸಾ-8 ಪೋನ್ ಮಾಡಿ ನಿಮ್ಮ ತಾಯಿ ಬಸ್ ಇಳಿದು ಹೋಗುವಾಗ ಹಾನಗಲ್ ಗ್ರಾಮದೇವಿ ಪಾದಗಟ್ಟಿ ಹತ್ತಿರ ಅಪಘಾತವಾಗಿರುತ್ತದೆ ಅಂತಾ ತಿಳಿಸಿದನು. ಅಪಘಾತವು ನನ್ನ ತಾಯಿ ಬಸ್ ಇಳಿದು ಹೋಗುವಾಗ ಬಸ್ ಚಾಲಕ ಬಸ್ ನ್ನು ಮುಂದಕ್ಕೆ ಚಲಾಯಿಸಿದ್ದರಿಂದ ಅವರ ಕಾಲಿನ ಮೇಲೆ ಹಾಯಿಸಿದ್ದರಿಂದ ಅವರಿಗೆ ಅಪಘಾತವಾಗಿದೆ ಎಂದು ಹೇಳಿದರು. ತಕ್ಷಣ ನಾನು ನನ್ನ ತಂದೆ ಚಾಸಾ-10 ರವರು ಸೇರಿ ಘಟನಾ ಸ್ಥಳಕ್ಕೆ ಬಂದೆವು. ನಾವು ಹೋಗುವಷ್ಟರಲ್ಲಿ ಅಲ್ಲಿದ್ದ ಜನ ಆ್ಯಂಬುಲೆನ್ಸನಲ್ಲಿ ಸರಕಾರಿ ಆಸ್ಪತ್ರೆಗೆ ಸೇರಿಸಿದ್ದರು. ವಾಹನ ಅಲ್ಲೇ ಇತ್ತು. ಗಾಡಿ ನಂ. ಕೆಎ-27 ಎಫ್ -509. ಅಲ್ಲಿಂದ ಆಸ್ಪತ್ರೆಗೆ ಹೋದೆವು. ನನ್ನ ತಾಯಿಯನ್ನು ವಿಚಾರಿಸಿದೆನು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಶಿರಸಿ ಶಿವಮ್ಮ ಆಸ್ಪತ್ರೆಗೆ ಹೋದೆವು. ಅಲ್ಲಿಂದ ಅವರು ಮಂಗಳೂರಿನ ಕೆ ಎಸ್ ಹೆಗಡೆ ಆಸ್ಪತ್ರೆಗೆ ಕಳುಹಿಸಿದರು. ಆಸ್ಪತ್ರೆಗೆ ಕಳುಹಿಸಿ ನಾನು ಠಾಣೆಗೆ ಬಂದು ದೂರು ಸಲ್ಲಿಸಿರುತ್ತೇನೆ.

ದೂರನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿ 4 ಪೊಟೋಗಳಲ್ಲಿರುವ ವಾಹನ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಎಂದು ಗುರುತಿಸಲಾಯಿತು. ವಿಚಾರಿಸಿದಾಗ ಬಸ್ ಚಾಲಕನ ಹೆಸರು ಬಸಪ್ಪ ವಾಲೀಕಾರ ಅಂತಾ ಗೊತ್ತಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಕೆ ವಕೀಲರಿಂದಃ</u>

ಮಂತಗಿಯಿಂದ ಹಾನಗಲ್ ವರೆಗೆ 3 ಹಳ್ಳಿಗಳು ಬರುತ್ತವೆ. ಮಂತಗಿ, ಶಿವಪುರ, ಕಾಮನಹಳ್ಳಿ ಹಳ್ಳಿಗಳು ಬರುತ್ತವೆ. ಸದರಿ ಬಸ್ ಗೆ 5-6 ಹಳ್ಳಿ ಜನ ಬರುತ್ತಾರೆ ಎಂದರೆ ಸರಿ. ಬೆಳಗಿನ ಬಸ್ ಆಗಿದ್ದರಿಂದ ಎಲ್ಲಾ ಶಾಲಾ ಮಕ್ಕಳು ಮತ್ತು ಉಳಿದ ಜನರು ಬರುತ್ತಾರೆ ಎಂದರೆ ಸರಿ. ಈಗ ಸರಕಾರದ ಶಕ್ತಿಯೋಜನೆ ಚಾಲ್ತಿಯಲ್ಲಿರುವುದರಿಂದ ಹೆಚ್ಚು ಜನರು ಬಸ್ ನಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಇರಬಹುದು. ಆ ದಿನ ಬಸ್ ನಲ್ಲಿ 130-150 ಜನ ಪ್ರಯಾಣ ಮಾಡಿದ್ದರು ಎಂದರೆ ಇರಬಹುದು. ಪಾದಗಟ್ಟಿ ಇದು ಹಾನಗಲ್ ಶಹರದ ಮದ್ಯದಲ್ಲಿರುವ ಬಸ್ ನಿಲ್ದಾಣ ಎಂದರೆ ಸರಿ. ಪಾದಗಟ್ಟಿ ಎದುರುಗಡೆ ಹಾನಗಲ್ ನ ಪುರಸಭೆ ಕಾರ್ಯಾಲಯ ಇದೆ ಎಂದರೆ ಸರಿ. ಪಾದಗಟ್ಟಿ ಜಾಗವು ಸಾಕಷ್ಟು ಜನದಟ್ಟಣೆಯ ಜಾಗ ಎಂದರೆ ಸರಿ.

ನನ್ನ ತಾಯಿಗೆ 60 ಕ್ಕಿಂತ ಹೆಚ್ಚು ವಯಸ್ಸಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ 60 ವರ್ಷ ಆಗಿದ್ದರಿಂದ ವಯೋವೃದ್ದರು ಹಾಗೂ ಸದೃಡ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಆರೋಗ್ಯ ಸರಿ ಇಲ್ಲದಿದ್ದರೂ ಆರೋಗ್ಯವಾಗಿದ್ದಾರೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ನಾನು ಹೇಳಿ ಬರೆಸಿರುತ್ತೇನೆ, ನಾನು ಕೈಯಿಂದ ಬರೆದಿರುವುದಿಲ್ಲ. ಸಾಯಂಕಾಲ 6.00 ಗಂಟೆಗೆ ದೂರು ಸಲ್ಲಿಸಿರುತ್ತೇನೆ. ಅಪಘಾತವಾದ ಬಗ್ಗೆ ದೂರಿನಲ್ಲಿ ಬರೆಸಿರುತ್ತೇನೆ. ಬೆಳಿಗ್ಗೆ ಬಸ್ ಗೆ ಹೋಗಿ ಅಲ್ಲಿಂದ ಇಳಿದು ಮುಂದೆ ಹೋಗುವಾಗ ಬಸ್ ಡಿಕ್ಕಿಪಡಿಸಿ ಗಾಲಿಗೆ ಬಲಗಾಲು ಪೂರ್ತಿ ಸಿಕ್ಕು ಜಕಂಗೊಂಡಿರುತ್ತದೆ ಅಂತಾ ಹೇಳಿ ಬರೆಸಿರುತ್ತೇನೆ. ಬಸ್ ನಲ್ಲಿ ರಸ್ಸ ಇದ್ದುದ್ದರಿಂದ ನನ್ನ ತಾಯಿ ಕೆಳಗೆ ಬಿದ್ದು ಹಿಂಬ್ಯಾಲನ್ಸ ಆಗಿ ವಯೋವೃದ್ದರಾಗಿ ಅನಾರೋಗ್ಯ ಇದ್ದುದ್ದರಿಂದ ನಿಂತ ಬಸ್ ನಿಂದ ಇಳಿಯುವಾಗ ಬಿದ್ದು ಗಾಯಗೊಂಡಿದ್ದಾರೆ ಎಂದರೆ ಸರಿಯಲ್ಲ. ಸರಕಾರದ ಶಕ್ತಿಯೋಜನೆಯಿಂದ ಸಾಕಷ್ಟು ಮಹಿಳೆಯರು ಬಸ್ ನಲ್ಲಿ ಇದ್ದುದ್ದರಿಂದ ಮತ್ತು ಬೇರೆ ಪ್ರಯಾಣಿಕರು ಇದ್ದುದ್ದರಿಂದ ನನ್ನ ತಾಯಿ ಬ್ಯಾಲೆನ್ಸ ತಪ್ಪಿ ಕೆಳಗೆ ಬಿದ್ದಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬಸ್ ಚಾಲನೆ ಇರಲಿಲ್ಲ ಎಂದರೆ ಸರಿಯಲ್ಲ.

ಈ ಘಟನೆಗೂ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳವು ಜನದಟ್ಟಣೆ ಪ್ರದೇಶವಾಗಿದ್ದರಿಂದ ವಾಹನ ಜೋರಾಗಿ ಹೊಡೆಯಲು ಬರುವುದಿಲ್ಲ ಮತ್ತು ಬೇರೆ ಯಾರಿಗೂ ಗಾಯವಾಗಿಲ್ಲ, ಆದ್ದರಿಂದ ಅಪಘಾತವು ಆರೋಪಿ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣಕ್ಕೋಸ್ಕರ ನಾವು ಆರೋಪಿ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪೋಲಿಸರ ಜೊತೆ ಮೀಲಾಪಿಯಾಗಿ ನನ್ನ ತಾಯಿಗೆ ಪರಿಹಾರ ಸಿಗಲಿ ಅಂತಾ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**: ಮರುವಿಚಾರಣೆ : ಇಲ್ಲ.**

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್